## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ವಿಧಾನ ಪರಿಷತ್ ಸದಸ್ಯರು | : | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1296 |
| ಉತ್ತರಿಸಬೇಕಾದ ದಿನಾಂಕ | : | 21.12.2018 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆಯಲ್ಲಿ ಸಹಕಾರಿ ಮತ್ತು ರಾಷ್ಟ್ರೀಯ ಬ್ಯಾಂಕುಗಳು (HDFC, AXIS, banks) ರೈತರು ತೆಗೆದು ಕೊಂಡ ಸಾಲದ ಮರು ಪಾವತಿಗೆ ಒತ್ತಾಯಿಸಿ ನೋಟೀಸ್ ಮತ್ತು ಬಂಧನದ ವಾರಂಟ್ ಹೊರಡಿಸಿ ರೈತರಿಗೆ ಮಾನಸಿಕ ಕಿರುಕುಳನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುಯೇ; ಹಾಗಿದ್ದಲ್ಲಿ, ರಾಷ್ಟ್ರೀಕೃತ ಬ್ಯಾಂಕುಗಳು ರೈತರಿಗೆ ನೀಡುತ್ತಿರುವ ಕಿರುಕುಳ ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಬೆಳಗಾವಿ ಜಿಲ್ಲೆಯ ಆಕ್ಸಿಸ್ ಬ್ಯಾಂಕ್‌ನವರು ರೈತರು ತೆಗೆದುಕೊಂಡ ಸಾಲದ ಮರು ಪಾವತಿಗೆ ಒತ್ತಾಯಿಸಿ ನೋಟಿಸ್ ಮತ್ತು ಬಂಧನದ ವಾರಂಟ್ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ಆಕ್ಸಿಸ್ ಬ್ಯಾಂಕಿನ ಸ್ಥಳೀಯ ಮೇಲಾಧಿಕಾರಿಗಳೊಂದಿಗೆ ಸರ್ಕಾರದ ಆರ್ಥಿಕ ಇಲಾಖೆಯವರು ಸದರಿ ವಿಷಯದಲ್ಲಿ ಚರ್ಚಿಸಿದ್ದಾರೆ.<br>ನಂತರ ಕೆಳಗಿನ ವಿಷಯಗಳ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಬ್ಯಾಂಕ್ ಅಧಿಕಾರಿಗಳು ತಿಳಿಸಿದರು.<br>1. ಕೋಲ್ಕತ್ತಾ ಹೈಕೋರ್ಟ್‌ನಲ್ಲಿ ದಾಖಲಿಸಿದ ಪ್ರಕರಣಗಳನ್ನು ಕರ್ನಾಟಕದ ಕೋರ್ಟ್‌ಗಳಿಗೆ ವರ್ಗಾಯಿಸಲು ಸೂಕ್ತ ಕ್ರಮಗಳನ್ನು ಜರೂರಾಗಿ ತೆಗೆದುಕೊಳ್ಳುವುದು.<br>2. ಸರ್ಕಾರದ ಬೆಳೆ ಸಾಲ ಮನ್ನಾ ಯೋಜನೆಗೆ ಒಳಪಡುವ ಸಾಲಗಳ ಬಗ್ಗೆ ಯಾವುದೇ ಕಾನೂನು ಕ್ರಮವನ್ನು ಸಧ್ಯಕ್ಕೆ ತೆಗೆದುಕೊಳ್ಳುವುದಿಲ್ಲ ಮತ್ತು ಸಾಲ ಮನ್ನಾ ಯೋಜನೆಯಲ್ಲಿ ಇಂತಹ ಸಾಲಗಳನ್ನು ಸೇರಿಸುವುದು.<br>ಸಾಲ ಮನ್ನಾ ಯೋಜನೆಯ ವ್ಯಾಪ್ತಿಗೆ ಒಳಪಡದ ಸಾಲಗಳ ಬಗ್ಗೆ ರೈತರೊಂದಿಗೆ ಚರ್ಚಿಸಿ "ಒನ್ ಟೈಮ್ ಸೆಟಲ್‌ಮೆಂಟ್" ಗೆ ಶಿಬಿರಗಳನ್ನು ಏರ್ಪಡಿಸುವುದು.<br>ಸಹಕಾರ ಬ್ಯಾಂಕುಗಳಿಂದ ಇಂತಹ ಯಾವುದೇ ಪ್ರಕರಣಗಳಿರುವುದಿಲ್ಲ. |
| ಆ) | ರೈತರ ಸಾಲ ಮನ್ನಾ ಮಾಡಲು ಸರ್ಕಾರವು ಅನುಸರಿಸುತ್ತಿರುವ ಮಾನದಂಡಗಳೇನು; ಸರ್ಕಾರವು ಈವರೆಗೆ ರೈತರ ಒಟ್ಟು ಎಷ್ಟು ಸಾಲವನ್ನು ಮನ್ನಾ ಮಾಡಿದೆ; ಇದು ಯಾವಗಲಿಂದ ಜಾರಿಗೆ ಬರುತ್ತದೆ; (ವಿವರ ನೀಡುವುದು) | **ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಮಾನದಂಡಗಳು.**<br>ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 08 ಸಿಎಎಮ್ 2018 (ಭಾ) ದಿನಾಂಕ:06-09-2018 ರಲ್ಲಿ ಮಾನದಂಡಳನ್ನು ನಿಗದಿಪಡಿಸಲಾಗಿದೆ. ವಿವರಗಳನ್ನು ಅನುಬಂಧ -01 ರಲ್ಲಿ ನೀಡಿದೆ.<br>ಬ್ಯಾಂಕುಗಳಿಂದ ಮಾಹಿತಿಯನ್ನು ಸಂಗ್ರಹಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಮತ್ತು ಬೆಳೆ ಸಾಲ ಮನ್ನಾಕ್ಕೆ ಅರ್ಹ ರೈತರನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದ್ದು, ಅರ್ಹ ರೈತರನ್ನು ಗುರುತಿಸಿದ ನಂತರ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ.<br>ದೊಡ್ಡಬಳ್ಳಾಪುರ ಮತ್ತು ಸೇಡಂ ತಾಲ್ಲೂಕುಗಳಲ್ಲಿ ಪೈಲೆಟ್ ಯೋಜನೆ ಪ್ರಾರಂಭವಾಗಿರುತ್ತದೆ. ಈ ತಾಲ್ಲೂಕುಗಳಲ್ಲಿ ಸಾಲ ಮನ್ನಾ ಯೋಜನೆಗೆ ರೂ.50 ಕೋಟಿ ಬಿಡುಗಡೆ ಮಾಡಲಾಗಿದೆ. ಈವರೆಗೆ 627 ಖಾತೆಗಳಿಗೆ ರೂ.2.92 ಕೋಟಿಗಳಷ್ಟು ಬೆಳೆ ಸಾಲ ಮನ್ನಾದ ಲಾಭ ತಲುಪಿದೆ.<br>**ಸಹಕಾರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾನದಂಡಗಳು.**<br>ಸರ್ಕಾರದ ಆದೇಶ ಸಂಖ್ಯೆ ಸಿಇಓ 163 ಸಿಎಲ್‌ಎಸ್ 2018 ದಿನಾಂಕ:14-08-2018 ಮತ್ತು ತಿದ್ದುಪಡಿ ಆದೇಶ ದಿ: 22-09-2018 ರಲ್ಲಿ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ವಿವರಗಳನ್ನು ಅನುಬಂಧ -02 ರಲ್ಲಿ ನೀಡಿದೆ. |

| | | |
|---|---|---|
| | | ಈ ಯೋಜನೆ ಅನುಷ್ಠಾನದಿಂದ 20.38 ಲಕ್ಷ ರೈತರಿಗೆ ರೂ. 9448.61 ಕೋಟಿಯಷ್ಟು ಸಾಲಮನ್ನಾ ಸೌಲಭ್ಯ ಪ್ರಯೋಜನ ದೊರೆಯಬಹುದೆಂದು ಅಂದಾಜಿಸಲಾಗಿದೆ. ಇಲ್ಲಿಯವರೆಗೆ ಸರ್ಕಾರದಿಂದ ರೂ.800 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಲಾಗಿದೆ.<br>ಸಾಲ ಮನ್ನಾ ಯೋಜನೆಯಲ್ಲಿ ಅಂದಾಜು 20.38 ಲಕ್ಷ ರೈತರು ಪ್ರಯೋಜನೆ ಪಡೆಯಲಿದ್ದು, ದಿ.11-12-2018 ರ ವರೆಗೆ ಗುರುತಿಸಿದ 13735 ಅರ್ಹ ಫಲಾನುಭವಿ ರೈತರಿಗೆ ಸಾಲ ಮನ್ನಾ ಮೊತ್ತ ಬಿಡುಗಡೆ ಮಾಡಲಾಗಿದೆ. |
| ಇ) | ಇದರಲ್ಲಿ ಸಹಕಾರ ವಲಯದ ಬ್ಯಾಂಕ್‌ಗಳೆಷ್ಟು; ರಾಷ್ಟ್ರೀಕೃತ ಬ್ಯಾಂಕ್‌ಗಳು ಎಷ್ಟು; ಹಾಗೂ ಯಾವ ಯಾವ ಬ್ಯಾಂಕಿನಲ್ಲಿ ಎಷ್ಟೆಷ್ಟು ಸಾಲವನ್ನು ಮನ್ನಾ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಸಹಕಾರ ಸಂಘ/ಬ್ಯಾಂಕುಗಳಲ್ಲಿ ಅಂದಾಜು 20.38 ಲಕ್ಷ ರೈತರಿಗೆ ರೂ.9448.61 ಕೋಟಿಗಳ ಸಾಲ ಮನ್ನಾ ಪ್ರಯೋಜನ ದೊರೆಯಲಿದ್ದು, ಇದುವರೆಗೆ ಬಿಡುಗಡೆ ಮಾಡಿದ ಮೊತ್ತದ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.<br>ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಈ ಯೋಜನೆಯಲ್ಲಿ 42 ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು (20 ರಾಷ್ಟ್ರೀಕೃತ ಬ್ಯಾಂಕುಗಳು) ಮತ್ತು 3 ಗ್ರಾಮೀಣ ಬ್ಯಾಂಕುಗಳು ಈ ಯೋಜನೆಗೆ ಒಳಪಡುತ್ತವೆ.<br><br>ದೊಡ್ಡಬಳ್ಳಾಪುರ ಮತ್ತು ಸೇಡಂ ತಾಲ್ಲೂಕುಗಳಲ್ಲಿ ಪೈಲೆಟ್ ಯೋಜನೆ ಪ್ರಾರಂಭವಾಗಿರುತ್ತದೆ. ಈ ತಾಲ್ಲೂಕುಗಳಲ್ಲಿ ಸಾಲ ಮನ್ನಾ ಯೋಜನೆಗೆ ರೂ.50 ಕೋಟಿ ಬಿಡುಗಡೆ ಮಾಡಲಾಗಿದೆ. ಈವರೆಗೆ 627 ಖಾತೆಗಳಿಗೆ ರೂ.2.92 ಕೋಟಿಗಳಷ್ಟು ಬೆಳೆ ಸಾಲ ಮನ್ನಾದ ಲಾಭ ತಲುಪಿದೆ. ಇದರಲ್ಲಿ ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ 351 ಖಾತೆಗಳಿಗೆ ರೂ.1.57 ಕೋಟಿಗಳಷ್ಟು ಬೆಳೆ ಸಾಲ ಮನ್ನಾದ ಲಾಭ ತಲುಪಿದೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿ 276 ಖಾತೆಗಳಿಗೆ ರೂ.1.35 ಕೋಟಿಗಳಷ್ಟು ಬೆಳೆ ಸಾಲ ಮನ್ನಾದ ಲಾಭ ತಲುಪಿದ್ದು ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ.<br><br>ಜಿಲ್ಲಾವಾರು, ತಾಲ್ಲೂಕುವಾರು & ಬ್ಯಾಂಕವಾರು ವಿವರಗಳನ್ನು ಲಗತ್ತಿಸಿದೆ. |
| ಈ) | ಸರ್ಕಾರದ ಸುತ್ತೋಲೆ ಹೊರಡಿಸಿ ಸಾಲಮನ್ನಾ ಮಾಡಿರುವುದನ್ನು ಘೋಷಿಸಿದ್ದರೂ. ರೈತರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳು ವಸೂಲಿಯ ಹೆಸರಿನಲ್ಲಿ ನಿರಂತರ ಹಿಂಸೆ ನೀಡುತ್ತಿರುವ ಬ್ಯಾಂಕ್‌ಗಳ ವಿರುದ್ಧ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ? (ವಿವರ ನೀಡುವುದು) | ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ಬ್ಯಾಂಕ್‌ರುಗಳ ಸಮಿತಿಯ ಸಭೆಯಲ್ಲಿ ಸರ್ಕಾರದ ಮುಖ್ಯಕಾರ್ಯದರ್ಶಿಯವರು ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಬ್ಯಾಂಕುಗಳು ಪರಿಹಾರ ಕ್ರಮಗಳನ್ನು ಕೈಗೊಂಡು ರೈತರ ಸಾಲಗಳನ್ನು ರಿಸ್ಟ್ರಕ್ಚರಿಂಗ್ (ಪುನರ್ರಚನೆ) ಮಾಡಲು ಆದೇಶ ನೀಡಿರುತ್ತಾರೆ. ಮುಖ್ಯಕಾರ್ಯದರ್ಶಿಯವರು ರೈತರ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಕಳವಳನ್ನು ಸಭೆಗೆ ತಿಳಿಸಿದರು. ಸಾಲ ವಸೂಲಾತಿ ನೋಟಿಸ್ ಗಳನ್ನು ಕೊಡುವ ಮೊದಲು ಮತ್ತು ವಸೂಲಾತಿ ಕ್ರಮಗಳನ್ನು ಕೈಗೊಳ್ಳುವ ಮೊದಲು ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳನ್ನು ಗಮನದಲ್ಲಿ ಇಟ್ಟುಕೊಂಡು ಸಂವೇದನಾಶೀಲರಾಗಿಲು ಸದರಿ ಸಭೆಯಲ್ಲಿ ತಿಳಿಸಿದರು. |

ಸಿಓ 314 ಸಿಎಲ್‌ಎಸ್ 2018

(ಬಂಡೆಪ್ಪ ಕಾಶೆಂಪೂರ)

ಸಹಕಾರ ಸಚಿವರು

ಅನುಬಂಧ - I

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯದಲ್ಲಿ ಸಂಕಷ್ಟದಲ್ಲಿರುವ ರೈತರು, ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ ಪಡೆದಿರುವ ಬೆಳೆ ಸಾಲ ಮನ್ನಾ ಯೋಜನೆ – 2018ರ ಕುರಿತು.

ಉಲ್ಲೇಖ: ದಿನಾಂಕ: 24.08.2018 ರಂದು ನಡೆದ ಸಚಿವ ಸಂಪುಟದ ಕಾರ್ಯಸೂಚಿ ಸಂಖ್ಯೆ 20ರಲ್ಲಿ ಅನುಮೋದನೆ.

*****

ಕಳೆದ ಕೆಲವು ವರ್ಷಗಳಲ್ಲಿ, ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಸತತ ಬರಗಾಲಗಳು ಕೃಷಿ ವಲಯದಲ್ಲಿ ಒತ್ತಡವನ್ನು ಹೆಚ್ಚಿಸಲು ಕಾರಣವಾಗಿವೆ. ರಾಜ್ಯದ ಕೃಷಿ ಕ್ಷೇತ್ರವು ನಿಶ್ಚಲತೆ, ಕಡಿಮೆ ಉತ್ಪಾದಕತೆ, ಆಗಾಗ್ಗೆ ಸಂಭವಿಸುವ ಬರಗಾಲಗಳು ಮತ್ತು ಕಡಿಮೆ ಮಟ್ಟದ ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಗಳಂತಹ ಗುಣಲಕ್ಷಣಗಳನ್ನು ಹೊಂದಿದೆ. ತೊಂದರೆಗೀಡಾದ ರೈತರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರುವುದು ಮತ್ತು ರೈತರನ್ನು ಸಾಲದ ಹೊರೆಯಿಂದ ಮುಕ್ತಗೊಳಿಸುವುದು ರಾಜ್ಯ ಸರ್ಕಾರದ ಪ್ರಮುಖ ಬದ್ಧತೆಯಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಈ ರೈತರ ಆರ್ಥಿಕ ಪರಿಸ್ಥಿತಿಗಳನ್ನು ಉತ್ತಮಗೊಳಿಸುವ ಉದ್ದೇಶದಿಂದ 2018–19ರ ಆಯವ್ಯಯದಲ್ಲಿ "ಬೆಳೆ ಸಾಲ ಮನ್ನಾ ಯೋಜನೆ" ಯನ್ನು ಘೋಷಿಸಿದೆ. ಕೃಷಿಯಲ್ಲಿ ಹೆಚ್ಚಿನ ಬಂಡವಾಳವನ್ನು ಹೂಡಿಕೆ ಮಾಡಲು ಅನುಕೂಲವಾಗುವಂತೆ ರೈತರಿಗೆ ಬೆಂಬಲ ನೀಡುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ. ರೈತರ ನಿರಂತರ ಉನ್ನತಿ ಮತ್ತು ಸಬಲೀಕರಣ ಈ ಯೋಜನೆಯ ದೀರ್ಘಕಾಲದ ಗುರಿಯಾಗಿದೆ.

ದಿನಾಂಕ: 05.07.2018ರಂದು ಮಂಡಿಸಿದ ಆಯವ್ಯಯ ಘೋಷಣೆಯಲ್ಲಿ ದಿನಾಂಕ: 31.12.2017 ರಂತೆ ಬಾಕಿ ಇರುವ ಎಲ್ಲಾ ರೈತರ ಎಲ್ಲಾ ಸುಸ್ತಿಯಾದ ಬೆಳೆ ಸಾಲಗಳನ್ನು ಕುಟುಂಬವೊಂದಕ್ಕೆ ರೂ. 2.00 ಲಕ್ಷ ಮೀರದಂತೆ ಸಾಲ ಮನ್ನಾ ಮಾಡುವ ಹಾಗೂ ಬೆಳೆ ಸಾಲಗಳನ್ನು ಸಕಾಲದಲ್ಲಿ ಮರುಪಾವತಿ ಮಾಡಿರುವ ರೈತರ ಸಾಲಗಳಿಗೆ ಅವರು ಮರುಪಾವತಿ ಮಾಡಿರುವ ಸಾಲದ ಮೊತ್ತ ಅಥವಾ ರೂ.25,000/– ಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪ್ರೋತ್ಸಾಹಧನವಾಗಿ ನೀಡಲು ನಿರ್ಧರಿಸಿದೆ.

ದಿನಾಂಕ: 24.08.2018ರಂದು ನಡೆದ ಸಚಿವ ಸಂಪುಟ ಸಭೆಯ ಕಾರ್ಯಸೂಚಿ ಕ್ರಮ ಸಂಖ್ಯೆ 20ರಲ್ಲಿ ಸದರಿ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಆದ್ದರಿಂದ ಕೆಳಗಿನ ಈ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 08 ಸಿಎಂ 2018 (ಭಾ), ಬೆಂಗಳೂರು, ದಿನಾಂಕ: 06.09.2018.</u>**

1. ಯೋಜನೆಯ ವ್ಯಾಪ್ತಿ

   ಅ) <u>ರೂ. 2.00 ಲಕ್ಷಗಳವರೆಗಿನ ಸುಸ್ತಿ ಸಾಲಗಳ ಮನ್ನಾ:</u>

   ದಿನಾಂಕ: 01.04.2009ರ ನಂತರ ಮಂಜೂರಾದ ಹಾಗೂ ದಿನಾಂಕ: 31.12.2017ರಂದು ಬಾಕಿ ಇರುವ ಎನ್.ಪಿ.ಎ (ಭಾರತೀಯ ರಿಸರ್ವ್ ಬ್ಯಾಂಕ್ ಆದೇಶದಂತೆ ವರ್ಗೀಕೃತವಾದ) ಸಾಲಗಳು, ರಿಸ್ಟ್ರಕ್ಚರ್ಡ್ ಸಾಲಗಳು ಮತ್ತು ಸುಸ್ತಿಯಿರುವ ಬೆಳೆ ಸಾಲಗಳನ್ನು ಪ್ರತಿ ಕುಟುಂಬಗಳಿಗೂ ರೂ. 2.00 ಲಕ್ಷ ಮೀರದಂತೆ ಕರ್ನಾಟಕ ಸರ್ಕಾರದಿಂದ ಮನ್ನಾ ಮಾಡಲಾಗುವುದು. ಅಂತಹ ಸಾಲಗಳ ಮೂರು ವಿಶಾಲ ವರ್ಗಗಳು ಈ ಯೋಜನೆಯಡಿಯಲ್ಲಿ ಅರ್ಹತೆ ಪಡೆದುಕೊಳ್ಳುತ್ತವೆ.

i. ಕಾರ್ಯ ನಿರ್ವಹಿಸದ ಸ್ವತ್ತುಗಳು (ಎನ್.ಪಿ.ಎ): ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ಸಾಲ ನೀಡುವ ಸಂಸ್ಥೆಗಳಿಂದ ವರ್ಗೀಕರಣ ಮಾಡಿದ ಬೆಳೆ ಸಾಲಗಳು.

ii. ರಿಸ್ಟ್ರಕ್ಚರ್ಡ್ ಬೆಳೆ ಸಾಲಗಳು: ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಯಂತೆ ನೈಸರ್ಗಿಕ ವಿಕೋಪಗಳಿಂದ ಮಧ್ಯಮಾವಧಿಯ ಸಾಲಗಳಾಗಿ ಮಾರ್ಪಡಿಸಿದ ಮತ್ತು ಮೂರರಿಂದ ಐದು ವರ್ಷಗಳ ಅವಧಿಯಲ್ಲಿ ಮರುಪಾವತಿಸಬಹುದಾದ ಸಾಲಗಳು.

iii. ಅವಧಿ ಮೀರಿದ ಸುಸ್ತಿ ಬೆಳೆ ಸಾಲಗಳು: ದಿ:31.12.2017 ರಂದು ಅವಧಿ ಮೀರಿದ ಸಾಲವನ್ನು ಹೊಂದಿರುವ ಬೆಳೆ ಸಾಲಗಳು.

**ಬಿ) ಸುಸ್ತಿಯಲ್ಲದ ಸಾಲಗಳಿಗೆ ಪ್ರತಿ ರೈತ ಕುಟುಂಬಕ್ಕೆ ರೂ. 25,000/- ಗಳವರೆಗೆ ಪ್ರೋತ್ಸಾಹಧನ:**

ದಿ: 31.12.2017 ರಂದು ಬಾಕಿಯಿರುವ ಸುಸ್ತಿಯಲ್ಲದ ಬೆಳೆ ಸಾಲಗಳನ್ನು ಹೊಂದಿರುವ ಹಾಗೂ ಹಿಂದಿನ ಸಾಲಿನ ಬೆಳೆ ಸಾಲಗಳನ್ನು ನಿಯಮಿತವಾಗಿ ಮರುಪಾವತಿ ಮಾಡಿದ ರೈತ ಕುಟುಂಬಕ್ಕೆ ಅವರು ಪಡೆದ ಬೆಳೆ ಸಾಲದ ಮೊತ್ತ ಅಥವಾ ರೂ. 25,000/- ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ಪ್ರೋತ್ಸಾಹಧನವಾಗಿ ನೀಡಲಾಗುವುದು.

ಕೃಷಿ, ತೋಟಗಾರಿಕಾ ಮತ್ತು ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುವುದಕ್ಕಾಗಿ, ಗರಿಷ್ಠ 12 ರಿಂದ 18 ತಿಂಗಳುಗಳೊಳಗೆ ಮರುಪಾವತಿಸಬೇಕಾದ ಅಲ್ಪಾವಧಿ ಸಾಲಗಳನ್ನು ಬೆಳೆ ಸಾಲಗಳೆಂದು ಅರ್ಥೈಸಲಾಗಿದೆ. ಇವು ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ತೋಟಗಾರಿಕಾ ಬೆಳೆ ಸಾಲಗಳನ್ನು ಒಳಗೊಂಡಿರುತ್ತವೆ. ಸಾಲವನ್ನು ತೆಗೆದುಕೊಂಡಿರುವ ರೈತ, ಸಾಲ ನೀಡುವ ಸಂಸ್ಥೆಗಳ ಶಾಖೆ ಹಾಗೂ ರೈತನ ಭೂಮಿಯು ಕರ್ನಾಟಕ ರಾಜ್ಯದಲ್ಲಿ ಇರಬೇಕು.

**2. ಸಾಲ ನೀಡುವ ಸಂಸ್ಥೆಗಳು:**

ಎಲ್ಲಾ ನಿಗದಿತ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಒಟ್ಟಾಗಿ ಸೇರಿಸಿ **"ಸಾಲ ನೀಡುವ ಸಂಸ್ಥೆಗಳು"** ಎಂದು ಕರೆಯಲಾಗುತ್ತದೆ.

**3. ಕುಟುಂಬದ ವ್ಯಾಖ್ಯಾನ:**

ಕುಟುಂಬವೆಂದರೆ, ರೈತ, ಅವನ / ಅವಳ ಸಂಗಾತಿ ಮತ್ತು ಅವರ ಅವಲಂಬಿತ ಮಕ್ಕಳನ್ನು ಒಳಗೊಂಡಿದೆ.

**4. ಯೋಜನೆಯಲ್ಲಿ ಒಳಪಡದ ವರ್ಗಗಳು:**

ಈ ಯೋಜನೆಯಲ್ಲಿ ಕೆಳಗಿನವುಗಳು ಅರ್ಹವಾಗಿರುವುದಿಲ್ಲ:-

i. ವೈಯಕ್ತಿಕ ರೈತ ಕುಟುಂಬಗಳನ್ನು ಹೊರತುಪಡಿಸಿ ಎಲ್ಲಾ ಕಾನೂನುಬದ್ಧ ಸಂಸ್ಥೆಗಳಿಗೆ ನೀಡಲಾದ ಬೆಳೆ ಸಾಲ.

ii. ಕಂಪನಿಗಳು ರೈತರಿಗೆ ನೀಡಿದ ಸಾಲಗಳು, ಸಾಲ ನೀಡುವ ಸಂಸ್ಥೆಗಳು ಕಾರ್ಪೋರೇಟ್ ಗ್ಯಾರಂಟಿ ಆಧಾರದ ಮೇಲೆ ರೈತರಿಗೆ ನೀಡಿದ ಸಾಲಗಳು, ಟ್ರಸ್ಟ್‌ಗಳು ಮತ್ತು ಪಾಲುದಾರಿಕೆ

ಸಂಸ್ಥೆಗಳು ಬ್ಯಾಂಕುಗಳಿಂದ ಪಡೆದ ಸಾಲಗಳು, ಮೈಕ್ರೋ ಫೈನಾನ್ಸ್ ಇನ್ಸ್ಟಿಟ್ಯೂಷನ್ಸ್ / ನಗರ ಸಹಕಾರ ಬ್ಯಾಂಕುಗಳಿಂದ ನೀಡಲಾದ ಸಾಲಗಳು.

iii. ಕೃಷಿ ಉತ್ಪನ್ನಗಳನ್ನು ಅಡವಿಟ್ಟುಕೊಂಡು ನೀಡಿರುವ ಸಾಲಗಳು, ರೈತರಿಗೆ ನೀಡಲಾದ ಒಡವೆ / ಆಭರಣದ ಸಾಲಗಳು ಮತ್ತು ಮೀನುಗಾರಿಕೆ / ಹೈನುಗಾರಿಕೆ ಮತ್ತು ಕೃಷಿ ಸಂಬಂಧಿತ ಇತರೆ ಸಾಲಗಳು.

iv. ಸರ್ಕಾರಿ, ಅರೆ– ಸರ್ಕಾರಿ ಅಥವಾ ಅನುದಾನಿತ ಸಂಸ್ಥೆಗಳ ಮತ್ತು ಸಾರ್ವಜನಿಕ ವಲಯದ ಅಧೀನದಲ್ಲಿರುವ ನೌಕರರಿಗೆ ನೀಡಿದ ಬೆಳೆ ಸಾಲಗಳು.

v. ರಾಜ್ಯ / ಕೇಂದ್ರದ ಸಂಚಿತ ನಿಧಿಯಿಂದ ತಿಂಗಳಿಗೆ ರೂ. 15,000/– ಕ್ಕೂ ಹೆಚ್ಚಿನ ಪಿಂಚಣಿ ಪಡೆಯುವ ನಿವೃತ್ತಿ ವೇತನದಾರರಿಗೆ (ಮಾಜಿ ಸೈನಿಕರನ್ನು ಹೊರತುಪಡಿಸಿ) ನೀಡಲಾದ ಸಾಲಗಳು, ಕಳೆದ 3 ಮೌಲ್ಯಮಾಪನ ವರ್ಷಗಳಲ್ಲಿ ಯಾವುದಾದರು ಒಂದು ವರ್ಷ ಆದಾಯ ತೆರಿಗೆ ಪಾವತಿ ಮಾಡಿದವರಿಗೆ ನೀಡಲಾದ ಬೆಳೆ ಸಾಲಗಳು.

vi. ಸ್ವಸಹಾಯ ಗುಂಪುಗಳು (ಎಸ್.ಹೆಚ್.ಜಿ.ಗಳು) ಮತ್ತು ಜಂಟಿ ಹೊಣೆಗಾರಿಕೆಯ ಗುಂಪುಗಳು (JLG) / ರೈತರಿಗೆ ಸಾಲವನ್ನು ನೀಡಲು ಸಕ್ಕರೆ ಕಾರ್ಖಾನೆಗಳಿಗೆ ನೀಡಿದ ಸಾಲಗಳು, ಕಂಪನಿಗಳು / ಸಹಭಾಗಿತ್ವ ಸಂಸ್ಥೆಗಳು ಕಾಂಟ್ರಾಕ್ಟ್ ಫಾರ್ಮಿಂಗ್ ಪಡೆದುಕೊಂಡಿರುವ ಸಾಲಗಳು.

vii. ರಾಜ್ಯದ ಸಹಕಾರ ಸಂಸ್ಥೆ / ಬ್ಯಾಂಕುಗಳಿಗೆ ಘೋಷಿಸಿರುವ ಬೆಳೆ ಸಾಲ ಮನ್ನಾ ಯೋಜನೆಯ ಫಲಾನುಭವಿಗಳು ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

5. **ಅನುಷ್ಠಾನ ಪ್ರಕ್ರಿಯೆ:**

ಮಾಹಿತಿ ಸಂಗ್ರಹಣೆ ಮತ್ತು ಪರಿಶೀಲನೆ

i. ಬ್ಯಾಂಕುಗಳು ಸಲ್ಲಿಸಬೇಕಾದ ದತ್ತಾಂಶ ಹರಿವಿನೊಂದಿಗೆ ಅನುಷ್ಠಾನ ಪ್ರಕ್ರಿಯೆಯು ಪ್ರಾರಂಭವಾಗುತ್ತದೆ. ರೈತರು ಸಲ್ಲಿಸಿದ ಅಗತ್ಯ ವಿವರಗಳನ್ನು (ಆಧಾರ್ ಸಂಖ್ಯೆ, ರೇಷನ್ ಕಾರ್ಡ್ ಸಂಖ್ಯೆ, ಸರ್ವೆ ಸಂಖ್ಯೆ ಮುಂತಾದವು) ಕ್ರೋಢೀಕರಿಸಿದ ನಂತರ ಬ್ಯಾಂಕುಗಳು ತಮ್ಮ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಿಂದ ಕ್ರೋಢಿಕೃತ ಮಾಹಿತಿಯನ್ನು ಸಲ್ಲಿಸುತ್ತವೆ.

ii. ಪ್ರಕ್ರಿಯೆಯ ಪ್ರಕಾರ ಬೆಳೆ ವಿಮೆ ಕ್ಲೈಮ್‌ಗಳ ಮೊತ್ತವನ್ನು ಬೆಳೆ ಸಾಲಗಳ ಖಾತೆಗೆ ಜಮಾ ಮಾಡಬೇಕು. ಕಳೆದ ಎರಡು ವರ್ಷಗಳಲ್ಲಿ ಯಾವುದೇ ಬೆಳೆ ಸಾಲಗಳು ಅಥವಾ ರೈತರ ಅವಧಿ ಮೀರಿದ ಇತರ ಸಾಲಗಳಿಗೆ ಕ್ಲೈಮ್‌ಗಳ ಮೊತ್ತಗಳು ಬಂದಿದ್ದಲ್ಲಿ, ಅವುಗಳನ್ನು ರೈತರ ಬೆಳೆ ಸಾಲಗಳಿಗೆ ಜಮಾ ಮಾಡಿದ ಬಗ್ಗೆ ಬ್ಯಾಂಕುಗಳು ಕಡ್ಡಾಯವಾಗಿ ದೃಢೀಕರಿಸಬೇಕು. ಬೆಳೆ ವಿಮಾ ಕ್ಲೈಮ್ ಮೊತ್ತವನ್ನು ರೈತರ ಉಳಿತಾಯ ಖಾತೆಗೆ ಜಮಾ ಮಾಡಲಾಗಿದ್ದರೆ, ಈ ಯೋಜನೆಯಡಿಯಲ್ಲಿ ಅರ್ಹವಿರುವ ಸಾಲ ಮನ್ನಾ ಮೊತ್ತದಲ್ಲಿ ಬೆಳೆ ವಿಮಾ ಕ್ಲೈಮ್ ಮೊತ್ತವನ್ನು ಕಡಿತಗೊಳಿಸಲಾಗುವುದು.

iii. ಈ ಯೋಜನೆಯಡಿಯಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಸಮಗ್ರತೆಗೆ ಪ್ರತಿ ಸಾಲ ನೀಡುವ ಸಂಸ್ಥೆಗಳು ಜವಾಬ್ದಾರರಾಗಿರತಕ್ಕದ್ದು. ಈ ಯೋಜನೆಯ ಅನುಷ್ಠಾನಕ್ಕೆ ಸಾಲ ನೀಡುವ ಸಂಸ್ಥೆಗಳು ಸಲ್ಲಿಸಿದ ಪ್ರತಿಯೊಂದು ದಸ್ತಾವೇಜು / ದಾಖಲೆ, ತಯಾರಿಸಲಾದ ಪಟ್ಟಿಗಳು ಮತ್ತು ಪ್ರಮಾಣ ಪತ್ರಗಳು ಪ್ರತಿಯೊಂದು ಸಾಲ ನೀಡುವ ಸಂಸ್ಥೆಗಳ ಅಧಿಕೃತ

ಅಧಿಕಾರಿಯ ಸಹಿ ಮತ್ತು ಅವರ / ಅವಳ ಹೆಸರನ್ನು ಉದ್ಯೋಗಿ ಕೋಡ್ ಸಂಖ್ಯೆಯೊಂದಿಗೆ ಸಂಸ್ಥೆಯ ಮುದ್ರೆಗಳನ್ನು ಒಳಗೊಂಡಿರಬೇಕು.

iv. ವಿಭಿನ್ನ ಬ್ಯಾಂಕುಗಳು, ವಿವಿಧ ವರ್ಷಗಳಲ್ಲಿ ಎನ್‌ಪಿಎ (NPA) ಖಾತೆಗಳನ್ನು ಮತ್ತು ಮರುನಿರ್ಮಾಣ ಮಾಡಿದ (ರಿಸ್ಟ್ರಕ್ಚರ್ಡ್) ಸ್ಟ್ಯಾಂಡರ್ಡ್ ಸ್ವತ್ತುಗಳನ್ನು / ಖಾತೆಗಳನ್ನು ಇತ್ಯರ್ಥಗೊಳಿಸಲು ವಿವಿಧ "ಒನ್ ಟೈಮ್ ಸೆಟಲ್‌ಮೆಂಟ್" (OTS) ಯೋಜನೆಗಳನ್ನು ಪರಿಚಯಿಸಿವೆ. ಚಾಲ್ತಿಯಲ್ಲಿರುವ ಒಟಿಎಸ್ ಯೋಜನೆಗಳು ಮತ್ತು ಆಂತರಿಕ ನೀತಿಗಳಿಗೆ ಅನುಸಾರವಾಗಿ ಬ್ಯಾಂಕುಗಳು ಎನ್‌ಪಿಎ ಖಾತೆಗಳು / ಸ್ಟ್ಯಾಂಡರ್ಡ್ ಪುನರ್ ರಚಿಸಲಾದ ಅರ್ಹ ಖಾತೆಗಳನ್ನು ಬೆಳೆ ಸಾಲದ ಮನ್ನಾ ಯೋಜನೆಯಡಿಯಲ್ಲಿ ತೀರ್ಮಾನ ಮಾಡಿಕೊಳ್ಳಬೇಕು. ತಮ್ಮ ವೈಯಕ್ತಿಕ ಒಟಿಎಸ್ ಯೋಜನೆಯಡಿ ಬ್ಯಾಂಕುಗಳು ಮಾಡಿದ ಒಪ್ಪಂದದ ಮೇಲೆ ಪ್ರತಿ ಕುಟುಂಬಕ್ಕೂ ರೂ.2.00 ಲಕ್ಷಗಳ ಮಿತಿಗೊಳಪಟ್ಟು ಸರ್ಕಾರದ ಸಹಾಯವು ಲಭ್ಯವಿರುತ್ತದೆ.

v. ಅರ್ಹ ಸಾಲಗಾರರ ಪಟ್ಟಿಯಲ್ಲಿ ಬರುವ ಎಲ್ಲಾ ಸಾಲ ಸಂಸ್ಥೆಗಳಿಂದ ಸಂಗ್ರಹಿಸಲಾದ ಮಾಹಿತಿಯನ್ನು ಗೊತ್ತುಪಡಿಸಿದ ಪ್ರಾಧಿಕಾರದಿಂದ ಸಂಗ್ರಹಿಸಲಾಗುತ್ತದೆ. ಅದೇ ರೀತಿಯಾಗಿ ವಿವರವಾಗಿ ಪ್ರಮಾಣೀಕರಿಸಿದ ನಂತರ ಸೂಕ್ತವಾದ ಹಣವನ್ನು ಅರ್ಹ ಖಾತೆಗಳಿಗೆ ಜಮಾ ಮಾಡಲಾಗುತ್ತದೆ. ರಾಜ್ಯ ಸರ್ಕಾರವು ಯೋಜನೆಯ ಅಡಿಯಲ್ಲಿ ಸ್ವೀಕರಿಸಿದ ಕ್ಲೈಮ್‌ಗಳನ್ನು ತೀರ್ಮಾನಿಸಿ / ನಿರ್ಧರಿಸಿ ಆಯಾ ಬ್ಯಾಂಕುಗಳು ನೋಡಲ್ ಶಾಖೆಗಳ ಮೂಲಕ ಸಂಬಂಧಪಟ್ಟ ಶಾಖೆಗೆ ಪ್ರಯೋಜನಗಳನ್ನು ತಲುಪಿಸಲಾಗುವುದು. ಬ್ಯಾಂಕುಗಳ ಸಾಲ ಮನ್ನಾ ಆದ್ಯತೆಯ ಕ್ರಮವು ಈ ರೀತಿಯಾಗಿರುತ್ತದೆ. ಎನ್‌ಪಿಎಗಳನ್ನು ಮೊದಲು ಮರುಪಾವತಿಸಿದ ನಂತರ ರೀಸ್ಟ್ರಕ್ಚರ್ಡ್ ಸಾಲಗಳನ್ನು ಪಾವತಿಸಲಾಗುವುದು. ತದನಂತರ ಸರಿಯಾದ ಸಮಯಕ್ಕೆ ಸಾಲಗಳನ್ನು ಮರುಪಾವತಿಸಿದ ರೈತರಿಗೆ ಪ್ರೋತ್ಸಾಹಧನವನ್ನು ಪಾವತಿಸಲಾಗುವುದು.

vi. ಅರ್ಹ ರೈತರ ಸದಸ್ಯರ ಪಟ್ಟಿಯಲ್ಲಿ ಅವನ / ಅವಳ ಹೆಸರನ್ನು ಸೇರಿಸಲಾಗಿಲ್ಲ ಎಂದು ಅಥವಾ ಅವರ ಸಾಲ ಮನ್ನಾ ಮೊತ್ತವನ್ನು ತಪ್ಪಾಗಿ ಲೆಕ್ಕ ಹಾಕಲಾಗಿದೆಯೆಂದು ಯಾವುದೇ ರೈತರು ಅಭಿಪ್ರಾಯಪಟ್ಟಲ್ಲಿ, ಅಂತಹವರು ತಾವು ಸಾಲ ತೆಗೆದುಕೊಂಡ ಬ್ಯಾಂಕ್ ಶಾಖೆಯ ಮೂಲಕ ದೂರು ಅರ್ಜಿಯನ್ನು ಕರ್ನಾಟಕ ಸರ್ಕಾರದಿಂದ ಗೊತ್ತುಪಡಿಸಿದ ಪ್ರಾಧಿಕಾರಕ್ಕೆ ಸಲ್ಲಿಸಬಹುದು.

vii. ತಾಂತ್ರಿಕ ಅವಶ್ಯಕತೆಗಳನ್ನು ಮ್ಯಾಪ್ ಮಾಡುವ ಮತ್ತು ರೂಪರೇಷೆಯ ಚೌಕಟ್ಟನ್ನು ರಚಿಸುವಲ್ಲಿ ಸರಿಯಾದ ರೀತಿಯಲ್ಲಿ ಸೂಕ್ತ ಅನುಷ್ಠಾನದ ಸವಾಲಿನ ಅವಶ್ಯಕತೆಗಳನ್ನು ಕ್ರೋಢೀಕರಿಸುವ ಓನ್ಲೈನಲ್ಲಿ ರಚಿಸಲಾದ ಸಮಿತಿಗಳು ಸಮರ್ಥ ರೀತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯನ್ನು ತೀರ್ಮಾನಿಸುತ್ತವೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಿದ ಮೇಲ್ವಿಚಾರಣಾ ಸಮಿತಿಯ ಯೋಜನೆಯು ಪೂರ್ಣಗೊಳ್ಳುವವರೆಗೆ ನಿಯಮಿತ ಸಮಯದಲ್ಲಿ ಅನುಷ್ಠಾನ ಪ್ರಕ್ರಿಯೆಯನ್ನು ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಮಾಡುವುದು. ಯೋಜನೆಯ ಪ್ರಗತಿಯ ವರದಿಗಳನ್ನು ನಿಯಮಿತ ಸಮಯದಲ್ಲಿ ನೋಡಲ್ ಇಲಾಖೆಯು ಮೇಲ್ವಿಚಾರಣಾ ಸಮಿತಿಗೆ ಸಲ್ಲಿಸಬೇಕು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಇ-ಆಡಳಿತ) ಇಲಾಖೆಯ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಮಿತಿಯು ಮೇಲ್ವಿಚಾರಣಾ ಸಮಿತಿಯ ಮಾರ್ಗದರ್ಶನದಲ್ಲಿ ಬೆಳೆ ಸಾಲದ ಮನ್ನಾ ಯೋಜನೆಯ ಅನುಷ್ಠಾನಕ್ಕಾಗಿ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತದೆ. ತಾಂತ್ರಿಕ ಸಮಿತಿಯಿಂದ ದತ್ತಾಂಶ ಏಕೀಕರಣ ಮತ್ತು ನಿರ್ವಹಣೆಗಾಗಿ

ಮಾಹಿತಿ ತಂತ್ರಜ್ಞಾನ (ಐಟಿ) ವ್ಯವಸ್ಥೆಯನ್ನು ಈ ಯೋಜನೆಯ ಸಮರ್ಥ ಅನುಷ್ಠಾನಕ್ಕೆ ಬಳಸಲಾಗುತ್ತದೆ.

viii. ಈ ಯೋಜನೆಯನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರದ ಕಂದಾಯ ಇಲಾಖೆಯು ನೋಡಲ್ ಇಲಾಖೆಯಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಈ ಯೋಜನೆಯ ಅನುಷ್ಠಾನದ ಜವಾಬ್ದಾರಿ ವಹಿಸುವ ನೋಡಲ್ ಅಧಿಕಾರಿಯಾಗಿತ್ತಾರೆ. ಜಿಲ್ಲಾ ಮಟ್ಟದ ಬ್ಯಾಂಕರುಗಳ ಸಮಿತಿ ಫಲಾನುಭವಿಗಳ ಗುರುತಿಸುವಿಕೆ ಮತ್ತು ಅರ್ಹ ಮನ್ನಾ / ಪ್ರೋತ್ಸಾಹಕ ಮೊತ್ತವನ್ನು ತೀರ್ಮಾನಿಸಲು ಜಿಲ್ಲಾಧಿಕಾರಿಗಳಿಗೆ ಎಲ್ಲಾ ರೀತಿಯ ಸಹಾಯವನ್ನು ನೀಡುವುದು. ಈ ಯೋಜನೆಯ ಸುಗಮ ಅನುಷ್ಠಾನಕ್ಕೆ ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯು ರಾಜ್ಯ ಸರ್ಕಾರದೊಂದಿಗೆ ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸುವ ಬ್ಯಾಂಕುಗಳೊಂದಿಗೆ ಸಮನ್ವಯ ಸಾಧಿಸಬೇಕು.

ix. ಕಂದಾಯ ಇಲಾಖೆಯು ಈ ಯೋಜನೆಯ ಸಂಪೂರ್ಣ ಮತ್ತು ಸಮರ್ಪಕ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಅವಶ್ಯಕವಾಗುವ ತಾಂತ್ರಿಕ ಅಧಿಕಾರಿಗಳನ್ನು ಹೊಂದಿದ ಹಾಗೂ ಆಯುಕ್ತರ ಶ್ರೇಣಿಯ ಓರ್ವ ಅಧಿಕಾರಿಯ ನೇತೃತ್ವದಲ್ಲಿ ಒಂದು ವಿಶೇಷ ಕೋಶವನ್ನು ರಚಿಸಬೇಕು. ಈ ಉದ್ದೇಶಕ್ಕಾಗಿ ಕಂದಾಯ ಇಲಾಖೆಯು ವಿಶೇಷ ಕೋಶವನ್ನು ರಚಿಸಿದ ನಂತರ ಇಲಾಖೆಯು ನೇಮಕಮಾಡಿದ ಓರ್ವ ಹಿರಿಯ ಅಧಿಕಾರಿಯು ಮೇಲ್ವಿಚಾರಣಾ ಸಮಿತಿ ಮತ್ತು ತಾಂತ್ರಿಕ ಸಮಿತಿಯ ಸಂಚಾಲಕರಾಗುತ್ತಾರೆ. ಯೋಜನೆಯ ಅನುಷ್ಠಾನವನ್ನು ತ್ವರಿತಗೊಳಿಸಲು ವಿಶೇಷ ಕೋಶವನ್ನು ದಿನಾಂಕ: 30.09.2018ರೊಳಗೆ ರಚಿಸಬೇಕು. ಅಲ್ಲಿಯವರೆಗೆ ಸರ್ಕಾರದ ಅಪರ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಿತ್ತೀಯ ಸುಧಾರಣೆ) ಇವರು ಮೇಲ್ವಿಚಾರಣಾ ಸಮಿತಿ ಮತ್ತು ತಾಂತ್ರಿಕ ಸಮಿತಿಯ ಸಂಚಾಲಕರಾಗಿತ್ತಾರೆ.

x. ಈ ವಿಶೇಷ ಕೋಶವು ಮನ್ನಾ ಮೊತ್ತಗಳನ್ನು ಪರಿಶೀಲಿಸಿ ಬಿಡುಗಡೆಗಾಗಿ ಪ್ರಸ್ತಾವನೆಗಳನ್ನು ಕಂದಾಯ ಇಲಾಖೆಗೆ ಸಲ್ಲಿಸಬೇಕು. ಕಂದಾಯ ಇಲಾಖೆಯು ತನ್ನ ಶಿಫಾರಸ್ಸುಗಳನ್ನು ಪರಿಶೀಲನೆ ಮತ್ತು ಹಣ ಬಿಡುಗಡೆಗೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಬೇಕು.

xi. ಯೋಜನೆಯ ಅನುಷ್ಠಾನಕ್ಕಾಗಿ ವಿವರವಾದ ಮಾರ್ಗಸೂಚಿಗಳನ್ನು ನೋಡಲ್ ಇಲಾಖೆಯಿಂದ ಪ್ರತ್ಯೇಕವಾಗಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವನ್ ಕುಮಾರ್ ಮಾಲಪಾಟಿ)
ಸರ್ಕಾರದ ಉಪ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ – ಕರ್ನಾಟಕ ರಾಜ್ಯ ಪತ್ರದಲ್ಲಿ ಕೂಡಲೇ ಪ್ರಕಟಿಸಿ ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ) / (ಇ&ಆರ್‌ಎಸ್‌ಎ) / (ಎ&ಇ), ಕರ್ನಾಟಕ ರಾಜ್ಯ ಬೆಂಗಳೂರು.
2. ಸನ್ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿರವರು, ವಿಧಾನ ಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸು ಇಲಾಖೆ (ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಸಹಕಾರ ಸಂಘಗಳ ನಿಬಂಧಕರು, #1, ಅಲಿ ಅಸ್ಕರ್ ರಸ್ತೆ, ಬೆಂಗಳೂರು.
13. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಸರ್ವೆ ಭವನ, ಕೆ.ಆರ್. ವೃತ್ತ, ಬೆಂಗಳೂರು.
14. ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಪ್ರದೇಶ, ವಸಂತನಗರ, ಬೆಂಗಳೂರು.
15. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು.
16. ತಾಂತ್ರಿಕ ನಿರ್ದೇಶಕರು, ರಾಷ್ಟ್ರೀಯ ಮಾಹಿತಿ ಕೇಂದ್ರ (NIC), 6&7ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು.
17. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ ವಿಧಾನಸೌಧ, ಬೆಂಗಳೂರು.
18. ಸರ್ಕಾರದ ಅಪರ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಿತ್ತೀಯ ಸುಧಾರಣೆ), ಬಹುಮಹಡಿ ಕಟ್ಟಡ, ಬೆಂಗಳೂರು.
19. ಸಂಚಾಲಕರು, ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ ಹಾಗೂ ಪ್ರಧಾನ ವ್ಯವಸ್ಥಾಪಕರು-ಸಿಂಡಿಕೇಟ್ ಬ್ಯಾಂಕ್, ಕಾರ್ಪೊರೇಟ್ ಕಚೇರಿ, ಗಾಂಧಿನಗರ, ಬೆಂಗಳೂರು.
20. ಎಲ್ಲಾ ವಾಣಿಜ್ಯ ಮತ್ತು ಗ್ರಾಮೀಣ ಬ್ಯಾಂಕುಗಳ ಪ್ರಾದೇಶಿಕ ಮುಖ್ಯಸ್ಥರುಗಳಿಗೆ
21. ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
22. ರಾಜ್ಯ ಖಜಾನೆ ಅಧಿಕಾರಿ, ಜೆ.ಸಿ. ರಸ್ತೆ ಬೆಂಗಳೂರು.
23. ಶಾಖಾ ರಕ್ಷಾ ಕಡತ – ಹೆಚ್ಚುವರಿ ಪ್ರತಿ.

ಅನುಬಂಧ - II

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ರೈತರು ಸಹಕಾರ ಸಂಘ/ಬ್ಯಾಂಕುಗಳಿಂದ ಅಲ್ಪಾವಧಿ ಬೆಳೆ ಸಾಲ ಪಡೆದು ದಿನಾಂಕ:10.07.2018 ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ಒಂದು ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷದವರೆಗಿನ ಸಾಲ ಮನ್ನಾ ಮಾಡುವ ಬಗ್ಗೆ.

ಓದಲಾಗಿದೆ: ದಿನಾಂಕ:09.08.2018ರಂದು ನಡೆದ ಸಚಿವ ಸಂಪುಟದ ಕಾರ್ಯಸೂಚಿ ಸಂಖ್ಯೆ 9ರಲ್ಲಿ ಅನುಮೋದನೆ.

***

**ಪ್ರಸ್ತಾವನೆ:**

ರಾಜ್ಯದಲ್ಲಿ ಕಳೆದ 4 ವರ್ಷಗಳ ಅವಧಿಯಲ್ಲಿ ಮೂರು ವರ್ಷಗಳಲ್ಲಿ ತೀವ್ರ ಬರಗಾಲ ಉಂಟಾದ ಹಿನ್ನೆಲೆಯಲ್ಲಿ ಸಂಪೂರ್ಣ ಸಾಲ ಮನ್ನಾ ಮಾಡಲು ರೈತರು, ರೈತ ಪ್ರತಿನಿಧಿಗಳು, ಸಹಕಾರಿಗಳು ಮತ್ತು ಜನಪ್ರತಿಗಳಿಂದ ಬೇಡಿಕೆ ಇರುತ್ತದೆ.

ಆಯವ್ಯಯ ಭಾಷಣದ ಚರ್ಚೆಯ ಸಂದರ್ಭದಲ್ಲಿ ವಿಧಾನ ಮಂಡಲದ ಅನೇಕ ಮಾನ್ಯ ಸದಸ್ಯರು ಸಹಕಾರ ಸಂಘಗಳಲ್ಲಿ ಸಾಲ ಪಡೆದ ಹೆಚ್ಚಿನ ರೈತರಿಗೆ ಪ್ರಸ್ತುತ ಘೋಷಣೆಯಾಗಿರುವ ಸಾಲ ಮನ್ನಾ ಯೋಜನೆಯಿಂದ ಪ್ರಯೋಜನವಾಗುವುದಿಲ್ಲವೆಂದು ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ, ದಿನಾಂಕ 12.07.2018ರಂದು ವಿಧಾನಸಭೆಯಲ್ಲಿ 2018-19ನೇ ಸಾಲಿನ ಆಯವ್ಯಯ ಭಾಷಣದ ಚರ್ಚೆಯ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಹಕಾರ ಸಂಘಗಳಲ್ಲಿ ಬೆಳೆ ಸಾಲ ಪಡೆದು ದಿನಾಂಕ:10.07.2018 ರವರೆಗೆ ಹೊರಬಾಕಿ ಹೊಂದಿದ ರೈತರಿಗೂ ರೂ.1.00 ಲಕ್ಷದವರೆಗಿನ ಸಾಲ ಮನ್ನಾ ಮಾಡುವುದಾಗಿ ಘೋಷಿಸಿರುತ್ತಾರೆ.

ಮೇಲೆ ಓದಲಾದ ದಿನಾಂಕ:09.08.2018ರಂದು ನಡೆದ ಸಚಿವ ಸಂಪುಟ ಕಾರ್ಯಸೂಚಿ ಕ್ರಮ ಸಂಖ್ಯೆ-9 ರಲ್ಲಿ ರಾಜ್ಯದ ರೈತರು ಸಹಕಾರ ಸಂಘ/ಸಹಕಾರ ಬ್ಯಾಂಕುಗಳಿಂದ ಅಲ್ಪಾವಧಿ ಬೆಳೆ ಸಾಲ ಪಡೆದು ದಿನಾಂಕ: 10.07.2018 ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ಒಂದು ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷದವರೆಗಿನ ಸಾಲ ಮನ್ನಾ ಮಾಡುವ ಪ್ರಸ್ತಾವನೆಗೆ ಅನುಮೋದನೆ ದೊರೆತಿರುತ್ತದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 163 ಸಿಎಲ್‌ಎಸ್ 2018, ಬೆಂಗಳೂರು, ದಿನಾಂಕ:14.08.2018**

ರಾಜ್ಯದ ಸಹಕಾರ ಸಂಸ್ಥೆಗಳು / ಬ್ಯಾಂಕುಗಳು ವಿತರಿಸಿದ ಅಲ್ಪಾವಧಿ ಬೆಳೆ ಸಾಲದ ಪೈಕಿ ದಿನಾಂಕ: 10.07.2018ಕ್ಕೆ ಹೊಂದಿರುವ ಹೊರಬಾಕಿ ಮೊತ್ತದಲ್ಲಿ ಒಂದು ರೈತ ಕುಟುಂಬಕ್ಕೆ ಗರಿಷ್ಠ ರೂ.1,00,000.00(ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳವರೆಗಿನ ಸಾಲವನ್ನು ಮನ್ನಾ ಮಾಡಲು ತೀರ್ಮಾನಿಸಿ, ಈ ಕೆಳಕಂಡ ಷರತ್ತಿಗೊಳಪಟ್ಟು ಆದೇಶ ಹೊರಡಿಸಲಾಗಿದೆ.

1442
24/08/2018

1. ಈ ಸೌಲಭ್ಯವು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಲ್ಯಾಂಪ್ಸ್, ಡಿಸಿಸಿ ಬ್ಯಾಂಕುಗಳು ಮತ್ತು ಪಿಕಾರ್ಡ್ ಬ್ಯಾಂಕುಗಳು ವಿತರಿಸಿದ ಅಲ್ಪಾವಧಿ ಬೆಳೆ ಸಾಲದ ಪೈಕಿ ದಿನಾಂಕ:10.07.2018ಕ್ಕೆ ಹೊಂದಿರುವ ಹೊರಬಾಕಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ.

2. ದಿನಾಂಕ:10.07.2018ಕ್ಕೆ ಇರುವ ಸಾಲದ ಹೊರಬಾಕಿಯಲ್ಲಿ ಒಂದು ರೈತ ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷದವರೆಗಿನ ಸಾಲವನ್ನು ಮನ್ನಾ ಮಾಡಲಾಗುವುದು.

3. ಮೇಲಿನ ಅವಧಿಯಲ್ಲಿ ಸಾಲ ಪಡೆದ ರೈತರು ಮೃತಪಟ್ಟಿದಲ್ಲಿ, ಅಂತಹ ವಾರಸುದಾರರಿಗೂ ಸಹ ಈ ಸೌಲಭ್ಯ ದೊರೆಯುತ್ತದೆ.

4. ಯೋಜನೆಯಡಿಯಲ್ಲಿ ಮನ್ನಾ ಮಾಡುವ ಸಾಲವು, ರೈತರು ಸಾಲ ಮರುಪಾವತಿ ಮಾಡುವ ಗಡುವು ದಿನಾಂಕಕ್ಕೆ ಜಾರಿಗೆ ಬರುತ್ತದೆ.

5. ದಿನಾಂಕ:10.07.2018ಕ್ಕೆ ಹೊರಬಾಕಿ ಇರುವ ಮೊತ್ತವನ್ನು ಸರ್ಕಾರದ ಆದೇಶ ಜಾರಿಯಾಗುವ ದಿನಾಂಕಕ್ಕೆ ಪೂರ್ಣವಾಗಿ ಮರುಪಾವತಿಸಿದ್ದಲ್ಲಿ ಮನ್ನಾ ಆಗಬೇಕಾದ ಮೊತ್ತವನ್ನು ರೈತರ ಉಳಿತಾಯ ಖಾತೆಗೆ ಜಮಾ ನೀಡಲಾಗುವುದು.

6. ಯೋಜನೆಯಲ್ಲಿ ಸಾಲ ಮನ್ನಾ ಆಗುವ ಅನುದಾನವನ್ನು ಡಿ.ಬಿ.ಟಿ. (Direct Benefit Transfer) ಮೂಲಕ ರೈತರ ಉಳಿತಾಯ ಖಾತೆಗೆ ಬಿಡುಗಡೆ ಮಾಡಲಾಗುವುದು.

7. ಈ ಯೋಜನೆಯಲ್ಲಿ ಈ ಕೆಳಕಂಡ ರೈತರಿಗೆ ಮತ್ತು ಸಾಲಗಳಿಗೆ ಸಾಲ ಮನ್ನಾ ಸೌಲಭ್ಯ ದೊರೆಯುವುದಿಲ್ಲ. (ದಿನಾಂಕ: 10.07.2018 ಕ್ಕೆ ಇದ್ದಂತೆ)

    ಅ. ಬೆಳೆ ಸಾಲ ಪಡೆದ ರೈತರು ಸರ್ಕಾರಿ, ಸಹಕಾರಿ ಮತ್ತು ಇತರೇ ಕ್ಷೇತ್ರದ ನೌಕರರಾಗಿದ್ದು ಪ್ರತೀ ತಿಂಗಳು ಒಟ್ಟಾರೆ ರೂ.20,000.00ಕ್ಕಿಂತ ಹೆಚ್ಚಿನ ವೇತನ/ಪಿಂಚಣಿ ಪಡೆಯುತ್ತಿದ್ದಲ್ಲಿ ಅಂತಹ ರೈತರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

    ಆ. ಕಳೆದ ಮೂರು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಆದಾಯ ತೆರಿಗೆ ಪಾವತಿಸಿದ್ದಲ್ಲಿ ಅಂತಹ ರೈತರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

    ಇ. ರೈತರಿಗೆ ತಮ್ಮ ಕೃಷಿ ಉತ್ಪನ್ನಗಳನ್ನು ಒತ್ತೆ ಇಟ್ಟುಕೊಂಡು ನೀಡುವ ಅಡವು ಸಾಲಗಳಿಗೆ, ಚಿನ್ನಾಭರಣಗಳನ್ನು ಅಡವಿಟ್ಟುಕೊಂಡು ನೀಡುವ ಚಿನ್ನಾಭರಣ ಸಾಲಗಳಿಗೆ, ವಾಹನಗಳನ್ನು ಖರೀದಿಸಲು ನೀಡುವ ಸಾಲಗಳಿಗೆ, ಪಶು ಭಾಗ್ಯ ಯೋಜನೆಯಲ್ಲಿ ಪಶು ಆಹಾರ ಕೊಳ್ಳಲು ನೀಡುವ ಸಾಲಗಳಿಗೆ, ಮೀನುಗಾರಿಕೆ ಉದ್ದೇಶಗಳಿಗೆ ನೀಡುವ ಸಾಲಗಳಿಗೆ, ಸ್ವಸಹಾಯ ಗುಂಪುಗಳಿಗೆ ಮತ್ತು ಜಂಟಿ ಬಾಧ್ಯತಾ ಗುಂಪುಗಳಿಗೆ ನೀಡುವ ಸಾಲಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

    ಈ. ರೈತರ ಹೆಸರಿನಲ್ಲಿ ದಿನಾಂಕ:10.7.2018ಕ್ಕೆ ಡಿಸಿಸಿ / ವಾಣಿಜ್ಯ ಬ್ಯಾಂಕುಗಳಲ್ಲಿ ಅಥವಾ ಪ್ಯಾಕ್ಸ್‌ನಲ್ಲಿ ಮುದ್ದತ್ತು ಠೇವಣಿ ಇದ್ದಲ್ಲಿ ಅಂತಹ ಮೊತ್ತವನ್ನು ಹೊರಬಾಕಿಯಲ್ಲಿ ಕಳೆಯತಕ್ಕದ್ದು.

8. ಈ ಯೋಜನೆಯಲ್ಲಿ ಅರ್ಹವಿರುವ ರೂ.1.00ಲಕ್ಷಗಳ ಅಸಲು ಮತ್ತು ಸಂಪೂರ್ಣ ಚಾಲ್ತಿ ಸಾಲಕ್ಕೆ ಸಂಬಂಧಿಸಿದ ಬಡ್ಡಿಯನ್ನು ಜಾರಿಯಲ್ಲಿರುವ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಭರಿಸಲಾಗುವುದು. ಸುಸ್ತಿಯಾದ ಪ್ರಕರಣಗಳಲ್ಲಿ ಬಡ್ಡಿಯನ್ನು ರೈತರು ಭರಿಸತಕ್ಕದ್ದು. ಈ ಯೋಜನೆಯಲ್ಲಿ ಲಾಭ ಪಡೆಯಲು ಚಾಲ್ತಿ ಸಾಲದ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ಗಡುವಿನ ದಿನಾಂಕದೊಳಗೆ ಮತ್ತು ಸುಸ್ತಿ ಸಾಲದ ಮರುಪಾವತಿ ದಿನಾಂಕದವರೆಗಿನ ಸಂಪೂರ್ಣ ಬಡ್ಡಿಯನ್ನು ಹಾಗೂ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ದಿನಾಂಕ: 31.03.2019ರೊಳಗೆ ಮರುಪಾವತಿಸತಕ್ಕದ್ದು.

9. ಯಾವುದೇ ರೈತರು ಒಂದಕ್ಕಿಂತ ಹೆಚ್ಚಿನ ಸಹಕಾರ ಸಂಘ/ಸಹಕಾರ ಬ್ಯಾಂಕುಗಳಲ್ಲಿ ಸಾಲ ಪಡೆದಿದ್ದಲ್ಲಿ ಒಂದು ಸಂಸ್ಥೆಯಿಂದ ಮಾತ್ರ ಸಾಲ ಮನ್ನಾ ಸೌಲಭ್ಯ ಪಡೆಯತಕ್ಕದ್ದು.

10. ಸಾಲ ಮನ್ನಾ ಯೋಜನೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ನಿಬಂಧಕರು ಆಡಳಿತಾತ್ಮಕ ಮಾರ್ಗಸೂಚಿಗಳನ್ನು ಹೊರಡಿಸಿ ಈ ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗುವಂತೆ ನೋಡಿಕೊಳ್ಳುವುದು.

11. ಈ ಯೋಜನೆಯಲ್ಲಿ ಅರ್ಹ ರೈತ ಫಲಾನುಭವಿ ಹಾಗೂ ಸಾಲ ಮನ್ನಾ ಮೊತ್ತವನ್ನು ಗುರುತಿಸಲು ಅನುಸರಿಸಬೇಕಾದ ವಿಧಿ-ವಿಧಾನಗಳ ಬಗ್ಗೆ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಅಮುಕಾ:ಆಇ:4607, ದಿನಾಂಕ:09.08.2018ರಲ್ಲಿ ನೀಡಿರುವ ಸಹಮತಿ ಮತ್ತು ಸಚಿವ ಸಂಪುಟ ದಿನಾಂಕ: 09.08.2018ರ ಸಭೆ ಸಂಖ್ಯೆ 5ರಲ್ಲಿನ ಕಾರ್ಯಸೂಚಿ ಕ್ರಮಸಂಖ್ಯೆ-9ರಲ್ಲಿ ಅನುಮೋದಿಸಿರುವಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್. ವೆಂಕಟಸ್ವಾಮಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.

ಇವರಿಗೆ :

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

ಪ್ರತಿಗಳು :

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು
5. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.

6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.
11. ಮುಖ್ಯ ಪ್ರಧಾನ ವ್ಯವಸ್ಥಾಪಕರು, ನಬಾರ್ಡ್ ಪ್ರಾಂತೀಯ ಕಛೇರಿ, ಕೆ.ಜಿ. ರಸ್ತೆ, ಬೆಂಗಳೂರು.
12. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು.
13. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
14. ಎಲ್ಲಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
15. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು.
16. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಉತ್ತುಂಗ, ನಂ.1, ಪಂಪಾಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
17. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು-18.
18. ಆಂತರಿಕ ಆರ್ಥಿಕ ಸಲಹೆಗಾರರು, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
19. ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
20. ರಾಜ್ಯ ಖಜಾನೆ ಅಧಿಕಾರಿ, ಜೆ.ಸಿ. ರಸ್ತೆ, ಬೆಂಗಳೂರು.
21. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 163 ಸಿಎಲ್ಎಸ್ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಮಹಡಿ,
ಬೆಂಗಳೂರು, ದಿನಾಂಕ: 22.09.2018.

## ತಿದ್ದುಪಡಿ ಆದೇಶ

ದಿನಾಂಕ:09.08.2018ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದ ರೈತರು ಸಹಕಾರ ಸಂಘ/ಸಹಕಾರ ಬ್ಯಾಂಕುಗಳಿಂದ ಅಲ್ಪಾವಧಿ ಬೆಳೆ ಸಾಲ ಪಡೆದು ದಿನಾಂಕ:10.07.2018ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ಒಂದು ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷದವರೆಗಿನ ಸಾಲ ಮನ್ನಾ ಮಾಡುವ ಪ್ರಸ್ತಾವನೆಗೆ ಅನುಮೋದನೆ ದೊರೆತಿರುತ್ತದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ: ಸಿಒ 163 ಸಿಎಲ್ಎಸ್ 2018, ದಿನಾಂಕ: 14.08.2018 ರಂದು ಸಾಲ ಮನ್ನಾ ಆದೇಶವನ್ನು ಹೊರಡಿಸಲಾಗಿದೆ.

ಈ ಮಧ್ಯೆ ಸಾಲ ಮನ್ನಾ ಆದೇಶದಲ್ಲಿ ನಮೂದಿಸಿರುವ ಕೆಲವೊಂದು ಷರತ್ತುಗಳಿಂದಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕಷ್ಟಸಾಧ್ಯವಾಗಿರುವುದರಿಂದ ದಿನಾಂಕ: 14.08.2018 ರಂದು ಹೊರಡಿಸಲಾಗಿರುವ ಸರ್ಕಾರಿ ಆದೇಶದಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಮಾರ್ಗದರ್ಶನ/ ಸ್ಪಷ್ಟೀಕರಣ ಕೋರಿ ಸಹಕಾರ ಸಂಘಗಳ ನಿಬಂಧಕರು ತಮ್ಮ ದಿನಾಂಕ: 03.09.2018ರ ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

- "ಕುಟುಂಬ ಸದಸ್ಯರ" ವ್ಯಾಖ್ಯಾನ.
- ಮಾಸಿಕ ರೂ. 20,000/- ವರೆಗಿನ ವೇತನದಾರರು/ಪಿಂಚಣಿದಾರರು ಮತ್ತು ಆದಾಯ ತೆರಿಗೆ ಪಾವತಿದಾರರಿಗೆ ಯೋಜನೆ ಅನ್ವಯಿಸುವ ಬಗ್ಗೆ.
- ಯೋಜನಾ ಫಲಾನುಭವಿಗಳು ಮುದ್ದತ್ತು ಚುಕವಣಿಗಳ ಬಗ್ಗೆ.
- ರೈತರ ಸಾಲದ ಉಳಿತಾಯ ಖಾತೆಗೆ ಸಾಲ ಮನ್ನಾ ಮೊಬಲಗು ಡಿ.ಬಿ.ಟಿ. ಮೂಲಕ ವರ್ಗಾಯಿಸುವ ಬಗ್ಗೆ.

ಈ ಬಗ್ಗೆ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ವೇತನದಾರರು, ಪಿಂಚಣಿದಾರರು, ಆದಾಯ ತೆರಿಗೆ ಪಾವತಿದಾರರಿಂದ ಸ್ವಯಂ ಘೋಷಣಾ ಪತ್ರವನ್ನು ಪಡೆದು ಜಾರಿಗೊಳಿಸುವುದು, ಮುದ್ದತ್ತು ಚುಕವಣಿ ಷರತ್ತನ್ನು ಕೈಬಿಡುವುದು, ಸಾಲ ಮನ್ನಾ ಮೊತ್ತವನ್ನು ಡಿ.ಬಿ.ಟಿ. ಮೂಲಕ ಜಮಾ ಮಾಡಲಾಗುವುದು ಎಂಬ ಷರತ್ತನ್ನು ಸಡಿಲಿಸಿ ರೈತರ ಉಳಿತಾಯ ಖಾತೆಗೆ ಜಮಾ ನೀಡಿ ಡಿ.ಸಿ.ಸಿ. ಬ್ಯಾಂಕುಗಳು ಈ ಮೊತ್ತವನ್ನು ಸಂಘ/ಬ್ಯಾಂಕುಗಳಲ್ಲಿನ ರೈತರ ಸಾಲದ ಖಾತೆಗೆ ವರ್ಗಾಯಿಸಲು ಮತ್ತು ಸಾಲ ಮನ್ನಾ ಮೊತ್ತ ಕ್ಲೇಮ್ ಮಾಡಲು ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಸರಳ ಮಾರ್ಗಸೂಚಿಗಳನ್ನು ನಿಬಂಧಕರು ಹೊರಡಿಸಲು ಸಚಿವ ಸಂಪುಟದ ಘಟನೋತ್ತರ ಅನುಮೋದನೆಯನ್ನು ಕಾಯ್ದಿರಿಸಿ, ಅನುಮತಿಸಿದೆ. ಅದರಂತೆ ಕೆಳಕಂಡ ತಿದ್ದುಪಡಿ ಆದೇಶ.

ಸಾಲ ಮನ್ನಾ ಆದೇಶ ಸಂಖ್ಯೆ: ಸಿಒ 163 ಸಿಎಲ್ಎಸ್ 2018, ದಿನಾಂಕ: 14.08.2018ರ ಆದೇಶದಲ್ಲಿನ ಷರತ್ತುಗಳಿಗೆ ಈ ಕೆಳಕಂಡಂತೆ ಮಾರ್ಪಡಿಸಿ, ತಿದ್ದುಪಡಿ ಆದೇಶ ಹೊರಡಿಸಲಾಗಿದೆ.

- ಷರತ್ತು ಸಂಖ್ಯೆ: 6 ರಲ್ಲಿ ಈಗಿರುವ ಷರತ್ತಿಗೆ ಬದಲಾಗಿ "ರೈತರ ಉಳಿತಾಯ ಖಾತೆಗೆ ಸಾಲ ಮನ್ನಾ ಮೊತ್ತವನ್ನು ಜಮಾ ನೀಡಿ, ಡಿ.ಸಿ.ಸಿ. ಬ್ಯಾಂಕುಗಳು ಈ ಮೊತ್ತವನ್ನು ಸಂಘ/ಬ್ಯಾಂಕಿನಲ್ಲಿರುವ ರೈತರ ಸಾಲದ ಖಾತೆಗೆ ಕೂಡಲೇ ವರ್ಗಾಯಿಸುವುದು" ಎಂದು ಮಾರ್ಪಡಿಸಲಾಗಿದೆ.

- ಷರತ್ತು ಸಂಖ್ಯೆ: 7 ರಲ್ಲಿನ (ಅ) ಮತ್ತು (ಆ) ಷರತ್ತಿಗೆ ಬದಲಾಗಿ "ವೇತನದಾರರು/ಪಿಂಚಣಿದಾರರು/ಆದಾಯ ತೆರಿಗೆ ಪಾವತಿದಾರರಿಂದ ಸ್ವಯಂ ಘೋಷಣಾ ಪತ್ರವನ್ನು ಪಡೆದು ಯೋಜನೆ ಜಾರಿಗೊಳಿಸುವುದು" ಎಂದು ಮಾರ್ಪಡಿಸಲಾಗಿದೆ.
- ಷರತ್ತು ಸಂಖ್ಯೆ: 7 (ಈ) ರನ್ನು ಕೈಬಿಡಲಾಗಿದೆ.
- ಷರತ್ತು ಸಂಖ್ಯೆ: 10 ರಲ್ಲಿ ಈಗಿರುವ ಷರತ್ತಿಗೆ ಬದಲಾಗಿ "ಸಹಕಾರ ಸಂಘಗಳ ಸಾಲ ಮನ್ನಾ ಮೊತ್ತ ಕ್ಲೇಮ್ ಮಾಡಲು ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಸರಳವಾದ ಮಾರ್ಗಸೂಚಿಗಳನ್ನು ನಿಬಂಧಕರು ನೀಡುವುದು" ಎಂದು ಸೇರಿಸಿ ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ವೆಂಕಟಸ್ವಾಮಿ) 2/1
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು, (ಜಿಎಸ್ಎಸ್ಎ)/(ಇಆರ್ಎಸ್ಎ)/(ಎಇ), ಕರ್ನಾಟಕ ರಾಜ್ಯ ಬೆಂಗಳೂರು.
2. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು
5. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-52.
11. ಮುಖ್ಯ ಪ್ರಧಾನ ವ್ಯವಸ್ಥಾಪಕರು, ನಬಾರ್ಡ್ ಪ್ರಾಂತೀಯ ಕಛೇರಿ, ಕೆ.ಜಿ. ರಸ್ತೆ, ಬೆಂಗಳೂರು.
12. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು.
13. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
14. ಎಲ್ಲಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
15. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು.
16. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಉತ್ತುಂಗ, ನಂ.1 ಪಂಪಾಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
17. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು-18.
18. ಆಂತರಿಕ ಆರ್ಥಿಕ ಸಲಹೆಗಾರರು, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
19. ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
20. ರಾಜ್ಯ ಖಜಾನೆ ಅಧಿಕಾರಿ, ಜೆ.ಸಿ. ರಸ್ತೆ, ಬೆಂಗಳೂರು.
21. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿ.